# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(5ಜಿ)ಪಿಆರ್/55/2004-05

ಮುಖ್ಯ ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 23/5/2022

## ಸುತ್ತೋಲೆ

ವಿಷಯ: ನಾಲ್ಕನೇ ದರ್ಜೆ ನೌಕರರ ವೃಂದದಿಂದ ದ್ವಿತೀಯ ದರ್ಜೆ ಸಹಾಯಕರು / ಕಂದಾಯ ವಸೂಲಿಗಾರರ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜವಾನರು, ಗ್ಯಾಂಗ್‌ಮೆನ್, ತೋಟಗಾರಿಕೆ ಮಾಲಿ, ಸ್ಯಾನಿಟರಿ ದಫೇದಾರ್ ಮತ್ತು ಇನ್ನಿತರೇ ಗ್ರೂಫ್ ಡಿ ವೃಂದದಿಂದ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರು / ಕಂದಾಯ ವಸೂಲಿಗಾರರ ಹುದ್ದೆಗೆ ಮುಂಬಡ್ತಿಯನ್ನು ನೀಡಲು ಪರಿಶೀಲಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ತಮ್ಮ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಾಲ್ಕನೇ ದರ್ಜೆ ನೌಕರರುಗಳ ಪೈಕಿ ಪಿ.ಯು.ಸಿ. ವಿದ್ಯಾರ್ಹತೆ ಹೊಂದಿ, ಕನಿಷ್ಟ 5 ವರ್ಷಗಳ ಸೇವೆಯನ್ನು ಸಲ್ಲಿಸಿರುವ ನೌಕರರ ಸೇವಾ ಪುಸ್ತಕ, ವಿದ್ಯಾರ್ಹತೆ ಪ್ರಮಾಣ ಪತ್ರಗಳು ಹಾಗೂ ಮುಂಬಡ್ತಿಗೆ ಇಚ್ಛೆ ಇರುವ / ಇಲ್ಲದಿರುವ ಬಗ್ಗೆ ಐಚ್ಛಿಕತೆ ಪತ್ರವನ್ನು ಮತ್ತು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ತನಿಖಾ ಪಟ್ಟಿಯನ್ನು ದೃಢೀಕರಣದೊಂದಿಗೆ ಈ ಸುತ್ತೋಲೆ ಹೊರಡಿಸಿದ 07 ದಿನಗಳೊಳಗಾಗಿ ಮುಖ್ಯ ಆಯುಕ್ತರ ಕಛೇರಿಯ ಆಡಳಿತ ಶಾಖೆಗೆ ಕಳುಹಿಸಿಕೊಡಲು ಸಂಬಂಧಪಟ್ಟ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಸೂಚಿಸಿದೆ.

23/5/22

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ರವರಿಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ/ಯೋಜನೆ/ಹಣಕಾಸು) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಎಲ್ಲಾ ವಲಯಗಳ ವಿಶೇಷ ಆಯುಕ್ತರವರುಗಳ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಎಲ್ಲಾ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
: ಸಂಬಂಧಪಟ್ಟ ಬಟವಾಟೆ ಅಧಿಕಾರಿಗಳಿಗೆ ಕಳುಹಿಸಿದೆ.
: ಮಾಹಿತಿ ಮತ್ತು ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಕಛೇರಿ ಪ್ರತಿ.

**ನಾಲ್ಕನೇ ದರ್ಜೆ ನೌಕರರ ವೃಂದದಿಂದ ದ್ವಿತೀಯ ದರ್ಜೆ ಸಹಾಯಕರು / ಕಂದಾಯ ವಸೂಲಿಗಾರರ ಹುದ್ದೆಗೆ ಮುಂಬಡ್ತಿ ನೀಡುವ ತನಿಖಾ ಪಟ್ಟಿ**

| ಕ್ರ.ಸಂ | ವಿಷಯ | ಮಾಹಿತಿ |
|---|---|---|
| 1. | ಹೆಸರು | |
| 2. | ಪದನಾಮ | |
| 3. | ಹುಟ್ಟಿದ ದಿನಾಂಕ | |
| 4. | ಕೆಲಸಕ್ಕೆ ಸೇರಿದ ದಿನಾಂಕ | |
| 5. | ವಿದ್ಯಾರ್ಹತೆ | |
| 6. | ಪ್ರವರ್ಗ | |
| 7. | ಪರೀಕ್ಷಾರ್ಥ ಸೇವಾವಧಿಯನ್ನು ಘೋಷಿಸಿಕೊಂಡ ದಿನಾಂಕ | |
| 8. | ಉತ್ತೀರ್ಣರಾಗಿರುವ ಇಲಾಖಾ ಪರೀಕ್ಷೆಗಳ ವಿವರಗಳು | |
| 9. | ಇವರ ವಿರುದ್ಧ ಲೋಕಾಯುಕ್ತ/ಇಲಾಖಾ ವಿಚಾರಣೆ ಬಾಕಿ ಇದೆಯೇ ಅಥವಾ ಇಲ್ಲವೇ? (ಇದ್ದಲ್ಲಿ ಪ್ರಕರಣದ ವಿವರಗಳನ್ನು ಒದಗಿಸುವುದು) | |
| 10. | ದ್ವಿತೀಯ ದರ್ಜೆ ಸಹಾಯಕರು / ಕಂದಾಯ ವಸೂಲಿಗಾರರ ಹುದ್ದೆಗಳಲ್ಲಿ ಯಾವ ಹುದ್ದೆಗೆ ಮುಂಬಡ್ತಿ ಐಚ್ಛಿಕತೆ ಸಲ್ಲಿಸಿರುತ್ತಾರೆ? | |
| 11. | ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ಸೇರಿದವರಾಗಿರುತ್ತಾರೆಯೇ / ಇಲ್ಲವೇ? | |
| 12. | ಷರಾ | |

ಬಟವಾಡೆ ಅಧಿಕಾರಿಗಳು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ